ಕರ್ನಾಟಕ ವಿಧಾನ ಪರಿಷತ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	638 (821)
ಸದಸ್ಯರ ಹೆಸರು	:	ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನ ಸಭೇಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	11.03.2020
ಉತ್ತರಿಸುವ ಸಚಿವರು	:	ಕೃಷಿ ಸಚಿವರು

*****

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಕೃಷಿ ಯಾಂತ್ರಿಕ ಉಪಕರಣಗಳು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುತ್ತಿದೆಯೇ;	ಹೌದು. 2019-20 ನೇ ಸಾಲಿನಲ್ಲಿ ಹೋಬಳಿಗಳಲ್ಲಿ ಸ್ಥಾಪಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಮುಖಾಂತರ ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ರೈತರಿಗೆ ಅನುಕೂಲವಾಗುವಂತೆ ಸದರಿ ಕೃಷಿ ಯಾಂತ್ರಿಕ ಉಪಕರಣಗಳ ಕೇಂದ್ರಗಳನ್ನು ಕೃಷಿ ಕೇಂದ್ರ ಹೋಬಳಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ತೆರೆಯಲಾಗಿದೆಯೇ;	ಪ್ರಸ್ತುತ, ರೈತರಿಗೆ ಅನುಕೂಲವಾಗುವಂತೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ಸ್ಥಳಾವಕಾಶ ಮತ್ತು ರೈತರಿಂದ ಬೇಡಿಕೆ ಇರುವ ಸ್ಥಳದ ಆಧಾರದ ಮೇಲೆ ತೆರೆಯಲಾಗಿದೆ. ರಾಜ್ಯದಲ್ಲಿ, ಇಲ್ಲಿಯವರೆಗೆ ಒಟ್ಟು 542 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
ಇ)	ಈ ಕೃಷಿ ಯಾಂತ್ರಿಕ ಉಪಕರಣ ಕೇಂದ್ರಗಳಲ್ಲಿ ರೈತರಿಗೆ ಯಾವ ಯಾವ ಯಾಂತ್ರಿಕ ಸಲಕರಣೆಗಳನ್ನು ಒದಗಿಸಲಾಗಿದೆ (ಮಾಹಿತಿ ನೀಡುವುದು)	ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಸ್ಥಳೀಯ ಬೆಳೆಗಳಿಗೆ ಅನುಗುಣವಾಗಿ ಹಾಗೂ ರೈತರಿಂದ ಬೇಡಕೆ ಇರುವ ಯಂತ್ರೋಪಕರಣಗಳ ಕುರಿತು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದು ದಾಸ್ತಾನು ಮಾಡಿ ರೈತರಿಗೆ ಬಾಡಿಗೆ ಆಧಾರದ ಮೇಲೆ ಒದಗಿಸಲಾಗುತ್ತಿದೆ. ಭೂಮಿ ಸಿದ್ದತೆ, ಕೊಯ್ಲು ಮತ್ತು ಕೋಯ್ಲೋತ್ತರ ಹಾಗೂ ಸಂಸ್ಕರಣ ಉಪಕರಣಗಳನ್ನು ಒದಗಿಸಲಾಗುತ್ತಿದೆ. ವಿವರಗಳನ್ನು **ಅನುಬಂಧದಲ್ಲಿ** ವಿವರಿಸಲಾಗಿದೆ.
ಈ)	ಇತ್ತೀಚಿನ ಆಧುನಿಕ ಕೃಷಿ ಯಾಂತ್ರಿಕ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ಹೌದು. ಈ ಕೆಳಕಂಡ ಇತ್ತೀಚಿನ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಸಹಾಯಧನದಡಿ ಮತ್ತು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಬಾಡಿಗೆ ಆಧಾರದ ಮೇಲೆ ನೀಡಲಾಗುತ್ತಿದೆ. • ರೋಟೋವೇಟರ್, • ಲೇಜರ್ ಗೈಡೆಡ್ ಲ್ಯಾಂಡ್ ಲೆವೆಲ್ಲರ್, • ಸಂಯುಕ್ತ ಬಿತ್ತನೆ ಬೀಜ ಮತ್ತು ರಸಗೊಬ್ಬರ ಕೂರಿಗೆ ಯಂತ್ರ. • ಭತ್ತ ನಾಟಿ ಮಾಡುವ ಯಂತ್ರ, • ಅಂತರ ಬೇಸಾಯ ಮತ್ತು ಕಳೆ ತೆಗೆಯುವ ಯಂತ್ರಗಳು, • ಸಸ್ಯ ಸಂರಕ್ಷಣಾ ಉಪಕರಣಗಳು (ಬೂಮ್ ಸ್ಪ್ರೇಯರ್‌ಗಳು), • ಬಹು ಬೆಳೆ ಕಟಾವು ಯಂತ್ರ, • ರೀಪರ್ ಮತ್ತು ಬೈಂಡರ್, • ಕಬ್ಬು ಕಟಾವು ಯಂತ್ರಗಳು, • ಬಹು ಬೆಳೆ ಒಕ್ಕಣೆ ಯಂತ್ರ ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳು.

ಇ-ಸಂಖ್ಯೆ: AG/ASC/16/2020.

(ಬಿ.ಸಿ. ಪಾಟೀಲ್)
ಕೃಷಿ ಸಚಿವರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನ ಸಭೇಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 638 (821) ಕ್ಕೆ ಅನುಬಂಧ:-

ಕ್ರ.ಸಂ	ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿರುವ ಯಂತ್ರೋಪಕರಣಗಳು
೦	**ಭೂಮಿ ಸಿದ್ದತೆಯ ಉಪಕರಣಗಳು**
1	ಟ್ರ್ಯಾಕ್ಟರ್ ಮತ್ತು ಟ್ರ್ಯಾಕ್ಟರ್‌ನ ಬಿಡಿ ಭಾಗಗಳು ಉದಾ: ಹುಕ್, ಟ್ರೈಲರ್, ಟ್ರಾಲಿ, ಬೋಲ್ಟ್ಸ್ ಇತ್ಯಾದಿ
2	ಪವರ್ ಟಿಲ್ಲರ್
3	ಎಂ.ಬಿ.ಫ್ಲೋ
4	ರೋಟವೇಟರ್
5	ಡಿಸ್ಕ್ ಪ್ಲೋ
6	ಡಿಸ್ಕ್ ಹ್ಯಾರೋ
7	ಕಲ್ಟಿವೇಟರ್
8	ಶುಗರ್ ಕೇನ್ ಸ್ಟಬಲ್ ಶೇವರ್ ಕಮ್ ಕಲ್ಟಿವೇಟರ
9	ಲೆವಲ್ಲರ್ ಬ್ಲೇಡ್
10	ಕೇಜ್ ವೀಲ್
11	ಬ್ಲೇಡ್ ಹ್ಯಾರೋ
12	ಲೇಜರ್ ಗೈಡೆಡ್ ಲ್ಯಾಂಡ್ ಲೆವೆಲ್ಲರ್
ಃ	**ನಾಟಿ / ಬಿತ್ತನೆ ಮಾಡುವ ಉಪಕರಣಗಳು**
13	ಪ್ಯಾಡಿ ಪ್ಲಾಂಟರ್
14	ಫರೋ ಒಪನರ್/ರಿಡ್ಜರ್
15	ಸೀಡ್ ಕಮ್ ಫರ್ಟಿಲೈಸರ್ಸ್ ಡ್ರಿಲ್
16	ರೋಟೋ ಟಿಲ್ ಡ್ರಿಲ್
17	ರೈಸ್ ಟ್ರೇ ನರ್ಸರಿ ಪ್ರಿಪರೇಷನ್ ಮಷೀನ್ ವಿತ್ ಟ್ರೇಸ್
18	ರೈಸ್ಡ್ ಬೆಡ್ ಪ್ಲಾಂಟರ್
ಅ	**ಅಂತರ ಕೃಷಿ ಸಲಕರಣೆ**
19	ವೀಡ್ ಸ್ಲಾಶರ್
20	ರೈಸ್ ಸ್ಟ್ರಾ ಚಾಪರ್
ಆ.21	**ಟ್ರ್ಯಾಕ್ಟರ್/ಪವರ್ ಟಿಲ್ಲರ್ ಮೌಂಟೆಡ್/ಪವರ್ ಆಪರೇಟೆಡ್ ಹೈ ಟೆಕ್ ಪಿ.ಪಿ. ಎಕ್ಯೂಪ್‌ಮೆಂಟ್**
ಇ	**ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು**
22	ಬಹುಬೆಳೆ ಒಕ್ಕಣೆ ಯಂತ್ರ
23	ಶೇಂಗಾ ಡಿಗ್ಗರ್
24	ಶೇಂಗಾ ಪಾಡ್ ಸ್ಟ್ರಿಪರ್
25	ಹಾರ್ವೆಸ್ಟರ್ ರೀಪರ್
26	ಕಂಬೈನ್ಡ್ ಹಾರ್ವೆಸ್ಟರ್
27	ಬೇಲರ್

ಈ	**ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಹಳು**
28	ಶುಗರ್‌ಕೇನ್ ತ್ರಾಶ್ ಕಟ್ಟರ್
29	ಕೋಕೋನಟ್ ಫ್ರಾಂಡ್ ಚಾಪರ್
30	ಚಾಫ್ ಕಟರ್
ಉ	**ಕೃಷಿ ಸಂಸ್ಕರಣಾ ಉಪಕರಣಗಳು**
31	ದಾಲ್ ಪ್ರೋಸೆಸರ್
32	ಮಿನಿ ರೈಸ್ ಮಿಲ್
33	ಮಿನಿ ಆಯಿಲ್ ಎಕ್ಸ್‌ಪೆಲ್ಲರ್
34	ರಾಗಿ ಪಾಲಿಶಿಂಗ್ ಮೆಷಿನ್
35	ರಾಗಿ ಕ್ಲೀನಿಂಗ್ ಮೆಷಿನ್
36	ಶುಗರ್ ಕೇನ್ ಕ್ರಶರ್
37	ಫ್ಲೋರ್ ಮಿಲ್
38	ಪಲ್ವರೈಸರ್‌ಗಳು
39	ರವಾ/ಕ್ಯಾಟಲ್ ಫೀಡ್ ಮೆಷಿನ್
40	ಚಿಲ್ಲಿ ಪೌಂಡಿಗ್ ಮೆಷಿನ್
41	ಶಾವಿಗೆ/ವರ್ಮಿಸಿಲ್ಲಿ ಮೆಷಿನ್
42	ಶುಗರ್ ಕೇನ್ ಜ್ಯೂಸ್ ಮೇಕಿಂಗ್ ಮೆಷಿನ್
43	ವೀಟ್ ಪಾಲಿಶರ್
44	**ಡೀಸೆಲ್ ಪಂಪ್ ಸೆಟ್‌ಗಳು**
*	ಈ ಮೇಲೆ ತಿಳಿಸಿರುವ ಯಂತ್ರೋಪಕರಣಗಳನ್ನು ಹೊರೆತುಪಡಿಸಿ ರೈತರಿಂದ ಬೇಡಿಕೆಯಿರುವ ಹಾಗೂ ಇತರೆ ಆಧುನಿಕ ಯಂತ್ರೋಪಕರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನುಮಾಡಿ ರೈತರಿಗೆ ಓದಗಿಸಲಾಗುವುದು.